ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಮೈಸೂರು, ಶನಿವಾರ, ೧೭, ಜನವರಿ, ೨೦೨೬ (ಪುಷ್ಯ, ೨೭, ಶಕವರ್ಷ, ೧೯೪೭) MYSURU, SATURDAY, 17, JANURAY, 2026 (PUSHYA, 27, SHAKAVARSHA, 1947)	ಸಂಚಿಕೆ ೦೬ Issue 06

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಕಛೇರಿ ದೂರವಾಣಿ: 08226-223160, 223170, ಫ್ಯಾಕ್ಸ್:08226-223180

ಸಂ:ಐಎನ್‌ಡಿ:ಸಿಆರ್:ಕ್ರಸುವ:ಅಧಿಸೂಚನೆ:01/2025-26 ದಿನಾಂಕ:17/07/2025

ಅಧಿಸೂಚನೆ

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ(ಕ್ರಷರ್) ನಿಯಂತ್ರಣ ಅಧಿನಿಯಮ 2013 ರಂತೆ ಕಲ್ಲುಪುಡಿ ಮಾಡುವ ಘಟಕಗಳನ್ನು (ಕ್ರಷರ್) ಸುರಕ್ಷಿತ ವಲಯದೊಳಗೆ ಸ್ಥಾಪಿಸಬೇಕಾಗಿರುತ್ತದೆ. ದಿನಾಂಕ:26.05.2025 ರಂದು ನಡೆದ ಚಾಮರಾಜನಗರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ನೀಡಿಕೆ ಹಾಗೂ ನಿಯಂತ್ರಣ ಪ್ರಾಧಿಕಾರ ಸಭೆಯ ನಿರ್ಣಯದಂತೆ ಕರ್ನಾಟಕ ಕ್ರಷರ್ ಘಟಕಗಳ ನಿಯಂತ್ರಣ ಅಧಿನಿಯಮ 2013 ರ ಕಲಂ 6(1) ರ ಷರತ್ತುಗಳು ಪೂರೈಕೆಯಾಗುತ್ತಿರುವ ಚಾಮರಾಜನಗರ ಜಿಲ್ಲೆಯ ಈ ಕೆಳಕಂಡ ಸ್ಥಳಗಳನ್ನು ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ (ಕ್ರಷರ್) ನಿಯಂತ್ರಣ ಅಧಿನಿಯಮ 2013ರ ಕಲಂ 6(3) ರಲ್ಲಿ ಪ್ರತ್ಯೋಜಿಸಿರುವ ಅಧಿಕಾರದಡಿಯಲ್ಲಿ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್) ಸುರಕ್ಷಿತ ವಲಯವೆಂದು ಘೋಷಿಸಲಾಗಿದೆ.

ಕ್ರಮ ಸಂ.	ಹೆಸರು & ವಿಳಾಸ	ತಾಲ್ಲೂಕು	ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಎ-ಗು)
1.	ಮೆ॥ಸಿಲ್ವರ್ ಸ್ಯಾಂಡ್ ಸ್ಟೋನ್ ಕ್ರಷರ್ & ಎಂ-ಸ್ಯಾಂಡ್ ಯೂನಿಟ್, ಪ್ರೋ:ಶ್ರೀ ಮೊಹಮ್ಮದ್ ಶಾಜಾನ್, "ಸಂಕಲ್ಪ ಮೊಹಲ್ಲಾ", #104, ಲಲಿತ ಮಹಲ್ ರಸ್ತೆ, ಮೈಸೂರು.	ಗುಂಡ್ಲುಪೇಟೆ	ಅರೇಪುರ	61/1	2-03
2.	ಮೆ॥ಎಸ್.ಎಸ್.ವಿ.ಎ ಸ್ಟೋನ್ ಕ್ರಷರ್ ಮತ್ತು ಎಂ-ಸ್ಯಾಂಡ್ ಘಟಕ, ಪೋ: ಶ್ರೀ ಜಗದೀಶ್ ಬಿನ್ ಲೇ॥ಧರ್ಮರತ್ನಾಕರ, ತೊರಮಾವು ಗ್ರಾಮ, ಚಿಕ್ಕಯ್ಯನ ಛತ್ರ ಹೋಬಳಿ, ಕೆ.ಎಸ್ ಹುಂಡಿ ಅಂಚೆ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.	ಗುಂಡ್ಲುಪೇಟೆ	ಬೆಳಚಲವಾಡಿ	197/6 (0-35 ಎ-ಗು), 197/7 (0-07 ಎ-ಗು)	1-02
3	ಮೆ॥ನಂದಿ ಸ್ಟೋನ್ ಕ್ರಷರ್ ಮತ್ತು ಎಂ-ಸ್ಯಾಂಡ್ ಯುನಿಟ್, ಪ್ರೋ:ಶ್ರೀ ಹೆಚ್.ಸಿ ಗೋಪಾಲಪ್ಪ ಬಿನ್ ಚಿನ್ನಸ್ವಾಮಪ್ಪ, ಹೊನ್ನೇಗೌಡನಹಳ್ಳಿ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ.	ಗುಂಡ್ಲುಪೇಟೆ	ಚಿಕ್ಕಾಟಿ	191/2 (1-06 ಎ-ಗು), 191/4 (0-15 ಎ-ಗು)	1-21

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ, 2013 ಮತ್ತು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ (ತಿದ್ದುಪಡಿ) ನಿಯಮಗಳು, 2020 ರಲ್ಲಿ ವಿಧಿಸಿರುವ ಷರತ್ತುಗಳನ್ವಯ ಮತ್ತು ಕಾಲಕಾಲಕ್ಕೆ ಸರ್ಕಾರವು ನೀಡುವ ನಿರ್ದೇಶನ ಹಾಗೂ ಮಾರ್ಗಸೂಚಿಗಳನ್ನು ಪಾಲಿಸಲು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಾವಳಿಗಳಂತೆ ಕ್ರಷರ್ ಸ್ಥಾಪಿಸಲು ಬದ್ಧರಾಗಿರಬೇಕು ಎಂಬ ಷರತ್ತುಗಳಿಗೆ ಒಳಪಡಿಸಿ ಈ ಅಧಿಸೂಚನೆ ಹೊರಡಿಸಿದೆ.

ಹಿರಿಯ ಭೂವಿಜ್ಞಾನಿ ಹಾಗೂ ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ
ಮತ್ತು ನಿಯಂತ್ರಣ ಪ್ರಾಧಿಕಾರ, ಚಾಮರಾಜನಗರ ಜಿಲ್ಲೆ,
ಚಾಮರಾಜನಗರ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ
ಮತ್ತು ನಿಯಂತ್ರಣ ಪ್ರಾಧಿಕಾರ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

PR-11

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

ಕರ್ನಾಟಕಸರ್ಕಾರ

ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ನೆಲಮಹಡಿ, ಪ್ರಜಾಸೌಧ, ಪಡೀಲ್, ಮಂಗಳೂರು-575007.
Office of the Senior Geologist, Dept. of Mines and Geology, Ground Flour, PrajaSoudhaPadil Mangalore.
ದೂರವಾಣಿಸಂಖ್ಯೆ: 0824-2429932 ಇ-ಮೇಲ್: ddmangalore.dmg@gmail.com

ಸಂಖ್ಯೆ: ಗಭೂಇ/ಹಿಭೂವಿ(ಮಂ)/ಕಗಗು/ಮರಳು/2025-26 ದಿನಾಂಕ: 12-01-2026

ಅಧಿಸೂಚನೆ

ವಿಷಯ: ದಕ್ಷಿಣ ಕನ್ನಡ ಜಿಲ್ಲೆಯ Non-CRZ ಪ್ರದೇಶದಲ್ಲಿ ಗುರುತಿಸಿರುವ ಮರಳು ಬ್ಲಾಕ್ ನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡುವ ಕುರಿತು.

ಉಲ್ಲೇಖ:1. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021 & 2023.

2. ತಾಲ್ಲೂಕು ಮರಳು ಸಮಿತಿ ಸಭೆಯ ನಿರ್ಣಯ ದಿನಾಂಕ 10-09-2025

3. ಜಿಲ್ಲಾ ಮರಳು ಸಮಿತಿ ಸಭೆಯ ನಿರ್ಣಯ ದಿನಾಂಕ 24-09-2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ವ್ಯಾಪ್ತಿಯ IV, V & VI ನೇ ಶ್ರೇಣಿಯ ನದಿಗಳ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ನ್ನು ಹೊಸ ಮರಳು ನೀತಿ 2020 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023, 2024 & 2025 ರ ನಿಯಮ 31-ZB ರಂತೆ Non-CRZ ವ್ಯಾಪ್ತಿಯ IV, V & VI ನೇ ಶ್ರೇಣಿಯ ನದಿಗಳಲ್ಲಿನ ಮರಳು ಬ್ಲಾಕ್ ನ್ನು ಸರ್ಕಾರಿ/ಅಭಿವೃದ್ಧಿ ಕಾಮಗಾರಿಗಳಿಗಾಗಿ ಸರ್ಕಾರಿ ಸ್ವಾಮ್ಯದ ಇಲಾಖೆ, ಸಂಸ್ಥೆ/ನಿಗಮ/ಮಂಡಳಿಗಳಿಗೆ ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಬಹುದಾಗಿದೆ.

ಅದರಂತೆ ಕರ್ನಾಟಕ ಹೊಸ ಮರಳು ನೀತಿ-2020 ಅನ್ನು ಅನುಷ್ಠಾನ ಗೊಳಿಸಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994 ರ ತಿದ್ದುಪಡಿ ನಿಯಮಗಳು,2016, 2021, 2023, 2024 & 2025 ರ ನಿಯಮ 31-R4(iv) & 31-U(3) ರನ್ವಯ ದಕ್ಷಿಣ ಕನ್ನಡ ಜಿಲ್ಲೆಯ Non-CRZ ಪ್ರದೇಶದಲ್ಲಿ ತಾಲ್ಲೂಕು ಮರಳು ಸಮಿತಿಯು ಜಂಟಿ ಸ್ಥಳ ಪರಿಶೀಲನೆ ನಡೆಸಿ ಮರಳು ಬ್ಲಾಕ್ ನ್ನು ಗುರುತಿಸಿ ನೀಡಿರುವ ಶಿಫಾರಸ್ಸಿನ ಮೇರೆಗೆ, ಕಾರ್ಯಾಪಾಲಕ ಅಭಿಯಂತರರು, National Highway Authaority of India (NHIA) ಇವರಿಗೆ ಮೀಸಲಿರಿಸಿ, ಕರ್ನಾಟಕ ಉಪಖನಿಜ ರಿಯಾಯಿತಿ ತಿದ್ದುಪಡಿ ನಿಯಮಗಳು 2021 ರ ನಿಯಮ 31-R3(iv) & 31-U(3) ಅಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲಾ ಮರಳು ಸಮಿತಿಯು ಈ ಕೆಳಕಂಡ ಮರಳು ಬ್ಲಾಕ್ ನ್ನು ಇ-ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ಅಧಿಸೂಚನೆ ಹೊರಡಿಸಿದೆ.

ಕ್ರ.ಸಂ.	ತಾಲ್ಲೂಕು	ಗ್ರಾಮ	ಸ.ನಂ.	ವಿಸ್ತೀರ್ಣ (ಎಕರೆಗಳಲ್ಲಿ)	ನದಿಹೆಸರು
1	ಪುತ್ತೂರು	ಉಪ್ಪಿನಂಗಡಿ	110/1ಎ	6.00	ನೇತ್ರಾವತಿ

ಹಿರಿಯ ಭೂವಿಜ್ಞಾನಿ ಹಾಗೂ ಸದಸ್ಯ ಕಾರ್ಯದರ್ಶಿ
ಜಿಲ್ಲಾ ಮರಳು ಸಮಿತಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

PR-12

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA